1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ.

**ಸಿ.ಸಿ. ನಂಬ್ರ 904/2026**

ಪಿರ್ಯಾದಿದಾರರುಃ ಸರ್ಕಾರದ ಪರವಾಗಿ ಕುಂದಾಪುರ ಠಾಣಾ ಪೊಲೀಸರು

- ಮತ್ತು -

ಆರೋಪಿಃ

1. ಗೋಪಾಲ ದೇವಾಡಿಗ, 61 ವರ್ಷ,
ತಂದೆಃ ದಿ. ಸುಬ್ಬಣ್ಣ,
ವಾಸಃ ಉಳ್ಳೂರು ಮೂಡ್ಲಕಟ್ಟೆ,
ಕಂದಾವರ ಗ್ರಾಮ,
ಕುಂದಾಪುರ ತಾಲೂಕು.

2. ಚಂದ್ರ, 55 ವರ್ಷ,
ತಂದೆಃ ದಿ. ಕುಷ್ಟ,
ವಾಸಃ ಮನೆ ನಂಬ್ರ 4-264 ಕಾಳಿಮನೆ,
ಚರ್ಚ ರೋಡ್, ಕಸಬಾ ಗ್ರಾಮ,
ಕುಂದಾಪುರ ತಾಲೂಕು.

:ಆಪಾದನೆಃ

ದಿ. 09.12.2025 ರಂದು 14.30 ಗಂಟೆ ಕುಂದಾಪುರ ತಾಲೂಕು, ಕಸಬಾ ಗ್ರಾಮದ, ಉದಯ ಪೂರ್ಣಿಮಾ ಹೊಟೇಲ್ ಬಳಿ ಸಾರ್ವಜನಿಕ ಸ್ಥಳದಲ್ಲಿ 1 ನೇ ಆಪಾದಿತನು ಮಟ್ಕಾ ಜುಗಾರಿ ಆಟ ಆಡುತ್ತಿರುವುದಾಗಿ ಚಾಸಾ2 ಮತ್ತು 3 ನೇಯವರಿಗೆ ಮಾಹಿತಿ ಬಂದಂತೆ ಚಾಸಾ1 ನೇಯವರು ಚಾಸಾ 2 ಮತ್ತು 3 ನೇಯವರ ಜೊತೆ ಠಾಣೆಯಿಂದ ಹೊರಟು ದಿ. 16.04.2026 ರಂದು 12.15 ಗಂಟೆ ಸಮಯಕ್ಕೆ ಸದ್ರಿ ಸ್ಥಳಕ್ಕೆ ಹೋಗಿ ದಾಳಿ ನಡೆಸಿ 1 ನೇ ಆರೋಪಿತನನ್ನು ವಶಕ್ಕೆ ಪಡೆದು ಆತನ ಬಳಿ ಇದ್ದ ನಗದು 750/- ಮಟ್ಕಾ ಸಂಖ್ಯೆ ಬರೆದ ಚೀಟಿ-1, ಬಾಲ್ ಪೆನ್ -1, ನ್ನು ಮಹಜರು ಮುಖೇನ ಸ್ವಾಧೀನಪಡಿಸಿಕೊಂಡು ಬಳಿಕ 1 ನೇ ಆರೋಪಿಯನ್ನು ವಿಚಾರಿಸಲಾಗಿ ಮಟ್ಕಾ ಚೀಟಿಯನ್ನು ಹಾಗೂ ಮಟ್ಕಾ ಹಣವನ್ನು ಸಂಗ್ರಹಿಸಿ ಮಟ್ಕಾ ಬುಕ್ಕಿಯಾದ 2 ನೇ ಆಪಾದಿತನಿಗೆ ನೀಡುತ್ತಿರುವುದಾಗಿ ಹಾಗೂ ಇದರಿಂದ 2 ನೇ ಆಪಾದಿತನು 1 ನೇ ಆಪಾದಿತನಿಗೆ ಕಮಿಷನ್ ನೀಡುತ್ತಿರುವುದಾಗಿದ್ದು, ಆ ಮೂಲಕ ಆರೋಪಿತರಾದ ನೀವುಗಳು ಕರ್ನಾಟಕ ಪೋಲೀಸ್ ಕಾಯಿದೆಯ ಕಲಂ 78(1), 78(111) ರಡಿಯಲ್ಲಿ ದಂಡನಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ.

ಪ್ರಶ್ನೆ-1ಃ ಈ ಅಪರಾಧದ ಬಗ್ಗೆ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

1ನೇ ಆರೋಪಿಯ ಉತ್ತರಃ

2ನೇ ಆರೋಪಿಯ ಉತ್ತರಃ

(ದಿನಾಂಕಃ 03 ನೇ ಜೂನ್ 2026 ರಂದು ಆಪಾದಿತನಿಗೆ ಬಹಿರಂಗ ನ್ಯಾಯಾಲಯದಲ್ಲಿ ಈ ಮೇಲಿನ ಆರೋಪವನ್ನು ಓದಿ ಹೇಳಿ ವಿವರಿಸಿ ಉತ್ತರ ಪಡೆದುಕೊಳ್ಳಲಾಗಿದೆ ಎಂಬುದಾಗಿ ದೃಢೀಕರಿಸುತ್ತೇನೆ)

1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ಕುಂದಾಪುರ.